ಬಂದ್ರೆ ನಾನು ಅದೃಷ್ಟಶಾಲಿ ಅಂತ ಭಾವಿಸ್ತೀನಿ.. ನೀವು ಸ್ವಾವಲಂಬಿಯಾಗಿ ಬದುಕಲು ನನ್ನ ಅಭ್ಯಂತರವೇನೂ ಇಲ್ಲ... ಅಪೂರ್ವ ಈ ವಿಚಾರದ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ... ನನ್ಗೆ ಮನೇಲಿ ಮದ್ವೆ ಆಗಲು ಒತ್ತಡ ಹೇರುತ್ತಾ ಇದ್ದಾರೆ.. ನೀವು ಒಪ್ಪಿದ್ರೆ ಈಗ್ಲೇ ನಿಮ್ಮನ್ನು ಮದ್ವೆಯಾಗಿ ಮನೆಗೆ ಕರ್ಕೊಂಡು ಹೋಗ್ತೀನಿ..' ಎಂದು ನಕ್ಕ. ಅವನ ಪ್ರೀತಿಯ ತೀವ್ರತೆ ಕಂಡು ಅಪೂರ್ವಳಿಗೆ ಗಾಬರಿಯಾಯಿತು. ತನ್ನ ಬಗ್ಗೆ ಇವನು ಎಷ್ಟೆಲ್ಲಾ ತಲೆ ಕೆಡಿಸಿಕೊಂಡಿದ್ದಾನೆ. ಆದರೆ ತನಗೆ ಅಂಥ ಯಾವ ಮಧುರ ಭಾವನೆಯೂ ಇವನ ಬಗ್ಗೆ ಇಲ್ಲ.. ಹಾಗೆಂದು ಹೇಳಿ ಅವನ ಮನನೋಯಿಸಲು ಇಷ್ಟಪಡಲಿಲ್ಲ... ಅವನು ಮಾತನಾಡಲು ಕರೆದದ್ದೇ ಈ ಕಾರಣಕ್ಕೆ ಎಂದು ಅವಳಿಗೆ ಸ್ಪಷ್ಟವಾಯಿತು.

'ನನ್ಗೆ ಯೋಚಿಸಲು ಸಮಯ ಕೊಡಿ..'ಎಂದಾಗ ಅವನ ಮುಖಭಾವ ಕುಂದಿತು. ಮತ್ತೆ ಅವನೆದುರು ಸಹಜವಾಗಿ ಮಾತನಾಡಲು ಅಪೂರ್ವಳಿಂದ ಸಾಧ್ಯವಾಗದೇ ಅಲ್ಲಿಂದ ಎದ್ದು ಬಂದಿದ್ದಳು.

ಮನೆಗೆ ಹಿಂದಿರುಗಿದ ಬಳಿಕವೂ ಅದೇ ಗುಂಗು ಅವಳ ಮನಸಲ್ಲಿ ತಿರುಗುತ್ತಿತ್ತು. ವೃತ್ತಿಯಲ್ಲಿ ವೈದ್ಯ, ಸ್ಫುರದ್ರೂಪಿ, ಉನ್ನತ ವ್ಯಕ್ತಿತ್ವ, ಸ್ನೇಹ ಎಲ್ಲಾ ಇರುವ ಆದರ್ಶನನ್ನು ಸ್ವೀಕರಿಸಲು ತನ್ನ ಮನಸ್ಸು ಹಿಮ್ಮೆಟ್ಟುತ್ತಿರುವುದೇಕೆ..? ತನ್ನ ಬಡತನ, ತನ್ನ ಪರಿಸ್ಥಿತಿ ಎಲ್ಲಾ ಅರಿವಿದ್ದೂ ತನ್ನ ಪ್ರೀತಿಯನ್ನು ಬಯಸಿ ಕೈ ಚಾಚಿ ಅವನನ್ನು ಮುಕ್ತವಾಗಿ ಒಪ್ಪಲು ತನ್ನಿಂದೇಕೆ ಸಾಧ್ಯವಾಗುತ್ತಿಲ್ಲ..? ಅವನ ಬಗ್ಗೆ ತನ್ನ ಹೃದಯದಲ್ಲಿ ಪ್ರೀತಿಯೇಕೆ ಅರಳುತ್ತಿಲ್ಲ..? ತನ್ನ ಮನಸ್ಸನ್ನು ಅವಳು ಮತ್ತೆ ಮತ್ತೆ ಕೆದಕಿದಾಗ ಅಲ್ಲಿ ಮೂಡಿತ್ತು ಆ ಮುಖ... ಆ ಉತ್ತರವನ್ನು ನಂಬಲಾರದೇ ಗಟ್ಟಿಯಾಗಿ ಕಣ್ಮುಚ್ಚಿ ಕುಳಿತಾಗಲೂ, ಆ ಮುಚ್ಚಿದ ಕಣ್ಣ ಕತ್ತಲೆಯಲ್ಲಿ ಮೂಡಿದ ಆ ಮುಖ..

ಸೂರ್ಯನದ್ದು... ಅದರೊಂದಿಗೇ ಹೊಡೆದುಕೊಳ್ಳುತ್ತಿದ್ದ ಹೃದಯ ಬಡಿತ..!

ತನ್ನ ಮನಸ್ಸು ಸದಾ ತುಡಿಯುತ್ತಿರುವುದು ಸೂರ್ಯನ ಬಗ್ಗೆ.. ಆ ದಿನ ದೇವಸ್ಥಾನದಲ್ಲಿ ಅವನು ತನ್ನ ಕೈ ಹಿಡಿದು ಕುಳಿತಾಗ ತನಗೂ ಆ ಪ್ರೀತಿಯ ಸಾಕ್ಷಾತ್ಕಾರವಾಗಿತ್ತು.. ಅವನ ಹಿನ್ನೆಲೆ, ಅವನ ನೋವು ತನ್ನದೆಂಬ ಭಾವನೆ ಅವನ ಕಂಬನಿ ಒರೆಸುವ ತವಕ.. ಅವನ ನೋವು ನೀಗಿಸುವ ತನ್ನ ಪ್ರಯತ್ನ.. ಅವನು ತನ್ನವನೆಂಬ ಭಾವನೆಗಾಗಿಯೇ ತಾನು ಅವನಿಗಾಗಿ ಇಷ್ಟೆಲ್ಲಾ ಮಾಡುತ್ತಿದ್ದೇನೆ...ಹೌದು..! ಸೂರ್ಯನನ್ನು ತಾನು ಪ್ರೀತಿಸುತ್ತಿದ್ದೇನೆ.. ಅವಳ ಹೃದಯ ಆ ಸಿಹಿಯಾದ ಸತ್ಯವನ್ನು ಅಂಗೀಕರಿಸಿತ್ತು.

* * *

'ನಾಳೆ ಸೂರ್ಯನ ಹುಟ್ಟಿದ ದಿವಸ ಅಪೂರ್ವ' ವಿಜಯಮ್ಮ ನುಡಿದಾಗ ಅಪೂರ್ವ ಖುಷಿಯಿಂದ ಕಣ್ಣರಳಿಸಿದಳು.

'ಹೌದಾ ಆಂಟಿ..?' ಅವಳ ಸಂಭ್ರಮ ಕಂಡು ವಿಜಯಮ್ಮ ಭಾರವಾದ ನಿಟ್ಟುಸಿರು ಹೊರದಬ್ಬಿದರು.

'ನಮ್ಮನ್ನು ಕಂಡ್ರೆ ಆಗದವನ ಥರ ವರ್ತಿಸುತ್ತಾನೆ.. ನೀನಿರೋ ಹೊತ್ತಿಗೆ ಸರಿಯಾಯ್ತು..ಇಲ್ಲಿದ್ರೆ ಮನೆ ಬಿಟ್ಟೇ ಹೋಗ್ತಿದ್ದನೋ.'

'ಹಾಗೇನೂ ಇಲ್ಲ ಆಂಟಿ..' ಎಂದು ಬಾಯಿ ಮಾತಿಗೆಂದರೂ ಸೂರ್ಯನಿಗೂ ತನ್ನ ಬಗ್ಗೆ ವಿಶೇಷವಾದ ಭಾವನೆ ಇದೆ ಎಂದು ಅವಳ ಅಂತರಂಗ ಗುರುತಿಸಿತ್ತು.

'ನಿನ್ನ ಮಾತು ಅವ್ನು ಒಪ್ತಾನೆ ಅಪೂರ್ವ..ನೀನು ನನ್ನ ಮಾತು ನಡೆಸಿಕೊಡ್ತೀಯಾ..?'

ಅಪೂರ್ವ ಅವರತ್ತ ಪ್ರಶ್ನಾರ್ಥಕವಾಗಿ ನೋಡಿದಾಗ 'ಹೇಗೂ ನಾಳೆ ಅವ್ನ ಹುಟ್ಟಿದ ಹಬ್ಬ..ಇವ್ರು ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಇವ್ನ ಹೆಸರಲ್ಲಿ ಶಾಶ್ವತ ಪೂಜೆ ಕಟ್ಟಿದ್ದಾರೆ.. ಅನ್ನದಾನವೂ ಇದೆ...ನಾವು ಹೇಳಿದ್ರೆ ಸೂರ್ಯ ಒಪ್ಪಲ್ಲ.. ನೀನೇ ಅವ್ನನ್ನ ಕರ್ಕೊಂಡು ಹೋಗಿ ಪೂಜೆ ನೆರವೇರಿಸಿ... ಅನ್ನಪ್ರಸಾದ ಸ್ವೀಕರಿಸಿ ಬನ್ನಿ...' ಎಂದರು. ಅಪೂರ್ವಳಿಗೆ ಒಪ್ಪದೇ ಇರಲು ಯಾವ ಕಾರಣಗಳು ಇರಲಿಲ್ಲ. ಸೂರ್ಯನಿಗೆ ನುಡಿದಾಗ ಅವನು ಇಷ್ಟವಿರದೇ ಹೋದರೂ ಒಪ್ಪಿದ.

ಮರುದಿನ ಹತ್ತು ಗಂಟೆಗೆ ಸೂರ್ಯನನ್ನು ಹೊರಡಿಸಿ ಆಟೋದಲ್ಲಿ ಲಕ್ಷ್ಮೀ ನರಸಿಂಹ ದೇವಸ್ಥಾನಕ್ಕೆ ಕರೆತಂದ ಅವನನ್ನು ಮೊದಲ ಬಾರಿ ಮೆಟ್ಟಿಲುಗಳ ಬಳಿ ವಿಕ್ಷಿಪ್ತನಾಗಿ ಕುಳಿತಿದ್ದ ಸ್ಥಿತಿ ನೆನಪಾಯಿತು.

ತನ್ನವರ ನಿರ್ಲಕ್ಷ್ಯಕ್ಕೊಳಗಾಗಿ ಕಳೆದು ಹೋದಂತಿದ್ದ ಸ್ಥಿತಿ, ಮರುಹುಟ್ಟು ಪಡೆದಂತೆ ಹೆತ್ತವರ ಪ್ರೀತಿ, ವಾತ್ಸಲ್ಯ ಬೆಂಬಲ ದೊರೆತು ಹೊಸ ಮನುಷ್ಯನಾಗಿದ್ದಾನೆ. ಮತ್ತೆ ರಾಯರು ತನ್ನ ಸ್ವಂತ ತಂದೆಯಲ್ಲ ಎಂಬ ಸತ್ಯ ಅವನ ಮನಸ್ಸನ್ನು ಕದಡಿ ಬಿಟ್ಟಿದೆ. ಹೇಗಾದರೂ ಆ ಕಹಿ ಭಾವನೆ ಹೋಗಲಾಡಿಸಿ ಸೂರ್ಯ ಮತ್ತೆ ಸಹಜ ಸ್ಥಿತಿಗೆ ಮರಳುವಂತಾಗಲಿ ಎಂದು ದೇವರಲ್ಲಿ ಅಪೂರ್ವ ಪ್ರಾರ್ಥಿಸಿಕೊಂಡಳು.

'ಸೂರ್ಯ ಇಷ್ಟು ವರ್ಷಗಳ ನಂತರ ಮೊದಲ ಬಾರಿಗೆ ನೀನೇ ಬಂದಿದ್ಯಾ ಪೂಜೆಗೆ.. ನಿಮ್ಮಂದೆ..ನೀನು ಚಿಕ್ಕವನಿದ್ದಾಗ ಈ ಶಾಶ್ವತ ಪೂಜೆ ಕಟ್ಟಿದ್ರು... ಪ್ರತಿ ವರ್ಷ ಈ ದಿನದ ಅನ್ನದಾನದ ಖರ್ಚು ನಿನ್ನಂದೆ ವತಿಯಿಂದ ನಡೀತಾ ಬಂದಿದೆ... ಪ್ರತಿ ವರ್ಷ ಅವ್ರು ಬರ್ತಿದ್ರು...ಇವತ್ತೇನು ಬರಲಿಲ್ಲ..? ಆರೋಗ್ಯವಾಗಿದ್ದಾರೆ ತಾನೇ?' ಪುರೋಹಿತರು ನುಡಿದಾಗ ಸೂರ್ಯನ ಮುಖ ವಿವರ್ಣವಾಯಿತು.

ಅಪೂರ್ವಳೇನೂ ಮಾತನಾಡದೇ ಹೋದರೂ ಸೂರ್ಯನ ಬದಲಾದ ಮುಖಭಾವ ಎಲ್ಲವನ್ನೂ ಹೇಳುತ್ತಿತ್ತು. ಪೂಜೆ, ಮಂಗಳಾರತಿ ಮುಗಿಸಿ ಹೊರ ಬಂದಾಗ ಅನ್ನಛತ್ರದ ಹೊರಗೆ, ಇಂದಿನ ಅನ್ನದಾನದ ಸೇವೆ ಸೂರ್ಯ ರಾವ್ ಎಂದು ಬರೆದ ಫಲಕ ಕಣ್ಣಿಗೆ ಬಿತ್ತು. ದೇವಾಲಯದ ಅನ್ನಪ್ರಸಾದ ಸ್ವೀಕರಿಸಲು ಕುಳಿತಾಗ,

'ಇವತ್ತು ಎಷ್ಟು ಜನ ನಿನ್ನ ಹೆಸರಲ್ಲಿ ಪ್ರಸಾದ ಸ್ವೀಕರಿಸುತ್ತಾ ಇದ್ದಾರೆ ಸೂರ್ಯ...ಎಂಥಾ ಭಾಗ್ಯವಲ್ವಾ ಇದು?' ಸೂರ್ಯ ಮಾತನಾಡಲಿಲ್ಲ.

'ಈ ಕಾರ್ಯ ಇಪ್ಪತ್ತು ವರ್ಷಗಳ ಮೇಲಿಂದ ನಡೆದು ಬರ್ತಾ ಇದೆ ಅಂತ ಪುರೋಹಿತರು ಹೇಳಿದ್ರಲ್ವಾ? ನಿಮ್ಮಂದೆಗೆ ನಿಮ್ಮೇಲೆ ಪ್ರೀತಿ ಇಲ್ದೇ ಹೋಗಿದ್ರೆ ಶಾಶ್ವತ ಪೂಜೆ, ಅನ್ನದಾನ ನಿನ್ನ ಹೆಸರಲ್ಲಿ ಇಷ್ಟು ವರ್ಷ ಮಾಡ್ಕೊಂಡು ಬರ್ತಿದ್ರಾ?' ಎಂದು ಕೇಳಿದಳು.

'ಅದು ಅಮ್ಮನ ಒತ್ತಾಯಕ್ಕೆ, ಹಣ ಕಟ್ಟಿ ತಾನು ಮಹಾನ್ ಅನ್ನಿಸಿಕೊಳ್ಳುವ ಪ್ರಯತ್ನ ಮಾಡಿರಬಹುದು...' ಸೂರ್ಯ ಉಡಾಫೆಯಿಂದ ಉತ್ತರಿಸಿದ. ಸೂರ್ಯನ ಮನಸ್ಥಿತಿಯನ್ನು ಅಷ್ಟು ಸುಲಭವಾಗಿ ಬದಲಿಸಲು ಸಾಧ್ಯವಿಲ್ಲವೆಂದು

## ಇಲ್ಲಿಯವರೆಗೆ



ರಾಯರ ಮನೆಯಲ್ಲಿ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿತ್ತು. ತನ್ನ ತಂದೆ ರಾಯರಲ್ಲ ಎಂಬ ಕಟುಸತ್ಯದ ಅರಿವಾಗಿದ್ದ ಸೂರ್ಯ ಮನಸ್ಸಿಗೆ ದುಗುಡ ಉಂಟಾಗಿತ್ತು. ಪೂಜೆ ದಿನ ಬೆಳಿಗ್ಗೆಯೇ ಆತ ಮನೆಬಿಟ್ಟು ಹೋಗಿದ್ದ. ಆತನನ್ನು ತಡೆಯುವ ಪ್ರಯತ್ನ ಮಾಡಿದರೂ ಅದು ವಿಫಲವಾಯಿತು. ಮನೆಗೆ ಬಂದವರೆಲ್ಲ ಸೂರ್ಯನ ಅನುಪಸ್ಥಿತಿ ಕಂಡು ವಿಚಾರಿಸಿದ್ದರು. ಪ್ರಸಾದ, ಊಟ ಮಾಡಿ ಎಲ್ಲರೂ ಹೊರಟರು. ಸಂಜೆಯಾದರೂ ಸೂರ್ಯ ಮನೆಗೆ ಬಂದಿರಲಿಲ್ಲ. ಕತ್ತಲಾವರಿಸಿದಾಗ ಆದರ್ಶ ತನ್ನ ತಾಯಿ ವಿದ್ಯಾರ ಜತೆ ಮನೆಗೆ ಬಂದಿದ್ದ. ಸೂರ್ಯನ ಬಗ್ಗೆ ಅವರೂ ವಿಚಾರಿಸಿದರು. ಜತೆಗೆ ಅವನಿಂದ ವಿಷಯ ಮುಚ್ಚಿಟ್ಟದ್ದೇ ತಪ್ಪು ಎಂದೂ ಹೇಳಿದರು. ಅಪೂರ್ವಳಿಗೂ ವಿಷಯ ತಿಳಿಯಿತು. ಸೂರ್ಯನ ಮನವೊಲಿಸುವ ಸಲುವಾಗಿ ಮರುದಿನ ಅಪೂರ್ವ ಆತನನ್ನು ದೇವಸ್ಥಾನಕ್ಕೆ ಕರೆದೊಯ್ದಳು.